ನಿರಂತರ ಜ್ಯೋತಿ ಯೋಜನೆ

904 (1794;ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

(ಅ) ಬೀದರ್ ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿ ನಿರಂತರ ಜ್ಯೋತಿ ಯೋಜನೆಯು ಯಾವಾಗ ಪ್ರಾರಂಭವಾಗಿದೆ;

(ಆ) ಅಧಿಕಾರಿಗಳು ಹಾಗೂ ಗುತ್ತಿಗೆದಾರರ ನಿರ್ಲಕ್ಷದಿಂದ ಈ ಯೋಜನೆಯಲ್ಲಿ ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಇ) ಬಂದಿದ್ದಲ್ಲಿ, ಹಾಲಿ ಗುತ್ತಿಗೆಯನ್ನು ರದ್ದು ಮಾಡಿ ಪುನಃ ಟೆಂಡರ್ ಕರೆದು, ಕಾಲಮಿತಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ. ಕೆ. ಶಿವಕುಮಾರ್ (ಇಂಧನ ಸಚಿವರು)

(ಅ) ಬೀದರ್ ಜಿಲ್ಲೆಯಲ್ಲಿ ನಿರಂತರ ಜ್ಯೋತಿ ಯೋಜನೆಯನ್ನು ಅನುಷ್ಠಾನ ಗೊಳಿಸಲಾಗಿರುವ ತಾಲ್ಲೂಕುವಾರು ವಿವರಗಳು ಈ ಕೆಳಗಿನಂತಿವೆ.

ಕ್ರ. ಸಂ.	ತಾಲ್ಲೂಕು	ಪ್ರಾರಂಭವಾದ ದಿನಾಂಕ
1	ಔರಾದ	10.10.2010
2	ಬೀದರ್	21.02.2014
3	ಭಾಲ್ಕಿ	26.11.2011
4	ಹುಮನಾಬಾದ್	16.08.2011
5	ಬಸವಕಲ್ಯಾಣ	16.08.2011

(ಆ) ಬೀದರ್ ಜಿಲ್ಲೆಯಲ್ಲಿ ನಿರಂತರ ಜ್ಯೋತಿ ಯೋಜನೆಗಾಗಿ ಗುತ್ತಿಗೆದಾರ ರಾದ ಮೆ॥ ತರೂಣಾ ಡೆಖೋಮ್ ಇಂಡಸ್ಟ್ರೀಸ್, ಬಿಕನ್ಯಾರ್ ರವರು ಸರಬರಾಜು ಮಾಡಿರುವ 11 ಕೆ. ವಿ. ಇನ್ಸುಲೇಟರ್‌ಗಳು ಕಳಪೆ

ಗುಣಮಟ್ಟದ್ದಾಗಿದ್ದುದರಿಂದ ವಿಫಲಗೊಂಡಿದ್ದು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ಗಮನಕ್ಕೆ ಬಂದಿರುತ್ತದೆ. ಗುತ್ತಿಗೆದಾರರಾದ ಮೆ॥ ತರೂಣಾ ಡೆಖೋಮ್ ಇಂಡಸ್ಟ್ರೀಸ್, ಬಿಕನ್ಯಾರ್ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆ.

(ಇ) ಹಾಲಿ ಗುತ್ತಿಗೆದಾರರಾದ ಮೆ॥ ತರೂಣಾ ಡೆಖೋಮ್ ಇಂಡಸ್ಟ್ರೀಸ್, ಬಿಕನ್ಯಾರ್ ಕಂಪನಿಗೆ ನೀಡಿದ್ದ ಕಾಮಗಾರಿಗಳನ್ನು ರದ್ದುಪಡಿಸಲಾಗಿದೆ.

ಸದರಿ ಯೋಜನೆಯ ಪ್ರಮುಖ ಸಾಮಗ್ರಿಗಳಾದ ಕಂಬಗಳು, ವಿದ್ಯುತ್ ತಂತಿ ಮತ್ತು 11 ಕೆ. ವಿ ಉತ್ತಮ ಗುಣಮಟ್ಟದ ಇನ್ಸುಲೇಟರ್‌ಗಳನ್ನು ಬೇರೊಂದು ಕಂಪನಿಯಿಂದ ಖರೀದಿಸಿ ಅರ್ಹ ಗುತ್ತಿಗೆದಾರರಿಗೆ ನೀಡಿ ನಿರಂತರ ಜ್ಯೋತಿ ಮಾರ್ಗಗಳನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ

905 (906);ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

(ಅ) ರಾಜ್ಯದಲ್ಲಿ ಪ್ರತಿ ದಿನ ವಿದ್ಯುತ್ ಬೇಡಿಕೆ ಎಷ್ಟು;

(ಆ) ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ ಪ್ರಮಾಣವೆಷ್ಟು;

(ಇ) ಹೊರ ರಾಜ್ಯಗಳಿಂದ ಹಾಗೂ ಕೇಂದ್ರದ ಗ್ರಿಡ್‌ನಿಂದ ಬರತಕ್ಕ ವಿದ್ಯುತ್ ಎಷ್ಟು;

(ಈ) ರಾಜ್ಯದಲ್ಲಿ ಪ್ರತಿದಿನ ಎಷ್ಟು ವಿದ್ಯುತ್ ಕೊರತೆ ಇದೆ;

(ಉ) ರಾಜ್ಯದಲ್ಲಿ 2008 ರಿಂದ ಇಲ್ಲಿಯವರೆಗೆ ಕೈಗೊಂಡ ಹೊಸ ವಿದ್ಯುತ್ ಉತ್ಪಾದನಾ ಯೋಜನೆಗಳು ಯಾವುವು;

(ಊ) ಇವುಗಳಿಗಾಗಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು;

(ಋ) 2013–14ನೇ ಸಾಲಿನಲ್ಲಿ ಕೈಗೊಂಡ ಹೊಸ ವಿದ್ಯುತ್ ಉತ್ಪಾದನಾ ಯೋಜನೆಗಳು ಯಾವುವು;